ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
ISSN: 2582-2284
Vol-3 Issue 1, July-August, 108-112
©*IIMRD*, Mysuru
IIMRD JOURNALS
www.iimrd.com

# 'ಜೋಗ್ಯೋರ ಅಂಜಪ್ಪನ ಕೋಳೀಕತೆ': ನ್ಯಾಯ ನಿರ್ಣಯದ ಜಿಜ್ಞಾಸೆ

**ವಿಜಯ್ ಕುಮಾರ್. ಟಿ* ಮತ್ತು ಡಾ. ಬಿ. ಎಸ್. ಸುದೀಪ್****

* ಸಂಶೋಧನಾರ್ಥಿ ; **ಮುಖ್ಯಸ್ಥರು ಮತ್ತು ಸಹಾಯಕ ಪ್ರಾಧ್ಯಾಪಕರು
ಕನ್ನಡ ಸ್ನಾತಕೋತ್ತರ ಮತ್ತು ಸಂಶೋಧನಾ ವಿಭಾಗ, ಜೆ.ಎಸ್.ಎಸ್. ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಮೈಸೂರು

***ಸಾರಾಂಶ* (Abstract)**

*'ಕನ್ನಡದ ಸಣ್ಣಕತೆಗಳ ಜನಕ' ಎಂದೇ ಹೆಸರುವಾಸಿಯಾಗಿರುವವರು, ಮಾಸ್ತಿಯವರು. ಇವರ "ಜೋಗ್ಯೋರ ಅಂಜಪ್ಪನ ಕೋಳೀಕತೆ"ಯು ಹಲವು ಕಾರಣಗಳಿಂದಾಗಿ ವಿಶೇಷವೆನಿಸುತ್ತದೆ. ಸತ್ಯಾನ್ವೇಷಣೆ ಮಾರ್ಗ ಎಷ್ಟು ಕಷ್ಟವೆಂಬುದು ಈ ಕತೆಯ ವಸ್ತುವಾಗಿ ಕಂಡುಬಂದರೆ, ನಿರಪರಾಧಿಗೆ ಶಿಕ್ಷೆಯಾಗಬಾರದು ಎಂಬುದು ಈ ಕತೆಯ ಆಶಯವಾಗಿದೆ. ಪ್ರಸ್ತುತ ಲೇಖನದಲ್ಲಿ ಈ ಕತೆಯಲ್ಲಿನ ನ್ಯಾಯ ನಿರ್ಣಯದ ಜಿಜ್ಞಾಸೆಯನ್ನು ವಿಶ್ಲೇಷಿಸಲಾಗಿದೆ.*

***ಮುಖ್ಯ ಪದಗಳು* (Keywords):** ಮಾಸ್ತಿ, ಸಣ್ಣ ಕತೆ, ಜೋಗ್ಯೋರ ಅಂಜಪ್ಪ, ಕೋಳಿ, ನ್ಯಾಯ, ಜಿಜ್ಞಾಸೆ.

**ಪೀಠಿಕೆ**

ಒಬ್ಬ ಸಾಮಾನ್ಯ ಜೋಗಪ್ಪನ ಪರಿಚಯದಿಂದ ಪ್ರಾರಂಭವಾಗುವ ಈ ಕತೆ, ಮುಕ್ತಾಯವಾಗುವುದರೊಳಗೆ ಜೋಗಪ್ಪನ ಪಾತ್ರಕ್ಕೆ ಒಂದು ಗೌರವ, ಅನುಕಂಪ, ಮೆಚ್ಚುಗೆ ಸಿಗುವಂತೆ ಮಾಡುತ್ತದೆ. ಊರಿನ ರಂಗಪ್ಪನಿಗೆ ಬೆಂಚು ಮ್ಯಾಜಿಸ್ಟ್ರೇಟ್ ಕೆಲಸ ದೊರಕುವ ಸನ್ನಿವೇಶವನ್ನು ಗಮನಿಸಿದರೆ ಅದು ಆಗಿನ ಬ್ರಿಟಿಷ್ ವಸಾಹತುಶಾಹಿ ಕಾಲದ ಚಾರಿತ್ರಿಕ ಸಂಗತಿಗಳನ್ನು ನಮ್ಮ ಮುಂದಿಡುತ್ತದೆ. ಕೇವಲ ಗೌರವಕ್ಕೆ, ಹೆಸರಿಗೆ ಮಾತ್ರವೇ ಶಾನುಭೋಗರನ್ನು ಬೆಂಚು ಮ್ಯಾಜಿಸ್ಟ್ರೇಟ್ ಮಾಡಿರುವುದನ್ನು ಗಮನಿಸುವಾಗ ಬ್ರಿಟಿಷರ ಆಡಳಿತದ ಕುಹಕದ ಕುರುಹುಗಳನ್ನು ಅರಿಯಬಹುದಾಗಿದೆ. ಜೋಗಪ್ಪನೇ ಹೇಳಿಕೊಳ್ಳುವಂತೆ ಆತ ಹೇಳುವ ಕತೆ ಕನಿಷ್ಟವೆಂದರೂ ಎಂಬತ್ತು, ತೊಂಬತ್ತು ವರ್ಷ ಹಳೆಯ ಸಾಮಾಜಿಕ ಪರಿಸರಕ್ಕೆ ನಮ್ಮನ್ನು ಕರೆದೊಯ್ಯುತ್ತದೆ. ಆದರೂ ಜೋಗಪ್ಪನೇ ರಂಗಪ್ಪನಿಗೆ "ಸಂಬ್ಳಾ ಒಂದಾದರೆ ಸಂಪಾದನೆ ಹತ್ತು" ಎಂದು ಹೇಳುವ ಸಂದರ್ಭಕ್ಕೆ ಈ ಮೊದಲು ಜೋಗಪ್ಪನು ಲಂಚದ ವಹಿವಾಟಿನ ಸಂಬಂಧಗಳನ್ನು ಬಲ್ಲವನಾಗಿದ್ದನೆಂತಲೂ ಅದಕ್ಕೆ ಉತ್ತರವಾಗಿ ರಂಗಪ್ಪನು, "ಈಗ ಲಂಚಾ ಗಿಂಚಾ ನಡೆಯೋದಿಲ್ಲ" ಎಂದು ಹೇಳುವಾಗ ಬ್ರಿಟಿಷರ ಆಳ್ವಿಕೆಯಲ್ಲಿ ಅದು ಅಲ್ಪ ಕಡಿಮೆಯಾಗಿತ್ತೋ ಎಂಬ ಸುಳಿವು ಸಿಗುತ್ತದೆ.

ಮ್ಯಾಜಿಸ್ಟ್ರೇಟ್ ಕೆಲಸ ದೊರೆತ ರಂಗಪ್ಪನಿಗೆ ಊರಿನ ಹಿರಿಯನಾದ ಜೋಗ್ಯೋರ ಅಂಜಪ್ಪನು ಕಿವಿಮಾತು ಹೇಳಲು ಬಂದಾಗ "ಏನು ಮಾತು ಅಂಜಪ್ಪ?, ಹೇಳು ನೀನು ಅನುಭವಸ್ಥ. ನಮ್ಮಂತವರಿಗೆ

ತಿಳಿಯಬೇಕಾದದ್ದು ನಿನಗೆ ನೂರು ಮಾತುಗೊತ್ತಿದೆ" ಎಂದು ಹೇಳುವ ರಂಗಪ್ಪನ ವಿನಯದಲ್ಲಿ 'ಅಧಿಕಾರಕ್ಕಿಂತ ಅನುಭವ ಹಿರಿಯದು' ಎಂಬ ತತ್ವ ಸಾಬೀತಾಗುತ್ತದೆ.

ಕತೆಯ ಹಲವಾರು ಕಡೆ ಜೀವನದ ಅನುಭವಗಳ ದೆಸೆಯಿಂದ ಮಾಗಿದ ಅಂಜಪ್ಪನ ವ್ಯಕ್ತಿತ್ವ ಬಿತ್ತರಗೊಂಡಿದೆ. ಅಂಜಪ್ಪನು ಎಲೆ ಹಾಕಿಕೊಳ್ಳುವ ಸಂದರ್ಭವನ್ನು ನೆನೆದರೆ ಅಲ್ಲೊಂದು ಸಾವಯವ ಬದುಕಿನ ಆದರ್ಶ ಗೋಚರವಾಗುತ್ತದೆ. ಹೇಗೆಂದರೆ ಅಂಜಪ್ಪನು ಎಲೆಯ ಸಂಚಿಯಲ್ಲಿ ಒಣಗಿದ ಎಲೆಗಳನ್ನೇ ಹುಡುಕಿ ಹಾಕಿಕೊಳ್ಳುವ ಸಂದರ್ಭದಲ್ಲಿ ಆತ ಯೋಚಿಸುವ ಪರಿ ವಿಶೇಷವಾದದ್ದು.

ಹಸಿರು ಎಲೆ ಇದೆಯಲ್ಲಾ ಎಂದು ಒಣಗಿದ ಎಲೆಯನ್ನು ಉಪಯೋಗಿಸದೇ ಇದ್ದರೆ ಅದು ಇನ್ನು ವ್ಯರ್ಥವಾಗಿ ಹೋಗುತ್ತದೆ. ಆದರೆ ಈಗ, ಉಪಯೋಗಿಸಬಹುದಾದ ಒಣಗಿದ ಎಲೆಯನ್ನು ಹಾಕಿಕೊಂಡರೆ ಉಳಿದ ಹಸಿರು ಎಲೆಯು ಮುಂದೆ ಉಪಯೋಗಿಸಲು ಬರುತ್ತದೆ. ಇದು ಪ್ರಸ್ತುತಕ್ಕೂ ಅಳವಡಿಸಬಹುದಾದ ಸಾವಯವ ಬದುಕಿನ (ಸಸ್ಟೇನಬಲ್ ಲೈಫ್) ಆದರ್ಶವಾಗಿದೆ. ಇಂದು ನಾವು ಯಾವುದು ಉತ್ತಮವೋ ಹಾಗೂ ಯಾವುದು ಉಪಯೋಗಿಸಲು ಅರ್ಹವೋ ಅವುಗಳ ನಡುವೆ ಯಾವುದು ಹೊಸತೋ ಅದನ್ನೇ ಆಯ್ಕೆ ಮಾಡುತ್ತೇವೆ. ಆದರೆ ಇಲ್ಲಿ ನಾವು ಸ್ವಲ್ಪ ಯೋಚಿಸಿ ಸದ್ಯಕ್ಕೆ ಉಪಯೋಗಿಸಲು ಅರ್ಹವಾದ ಸಂಪನ್ಮೂಲಗಳನ್ನು ಉಪಯೋಗಿಸಿ, ಆ ಮೂಲಕ ಮುಂದಿನ ಪೀಳಿಗೆಗೂ ಸಹ ಉತ್ತಮ ಸಂಪನ್ಮೂಲಗಳನ್ನು ಉಳಿಸುವ ಪ್ರಯತ್ನ ಮಾಡಬಹುದಾಗಿದೆ. ಈ ಎಲ್ಲಾ ಅಂಶಗಳನ್ನು ನಾವು ಅಂಜಪ್ಪನ ಎಲೆ ಆರಿಸುವ ನಿದರ್ಶನದಿಂದ ಗಮನಿಸಬಹುದಾಗಿದೆ.

ಕತೆಯ ಒಳಗೆ ಪ್ರವೇಶಿಸುತ್ತಾ ಜೋಗ್ಯೋರ ಅಂಜಪ್ಪನು ತನ್ನ ಜೀವನದಲ್ಲಿ ನಡೆದ ಘಟನೆಯೊಂದನ್ನು ಸಮಯೋಚಿತವಾಗಿ ರಂಗಪ್ಪನಿಗೆ ಹೇಳುತ್ತಾ ಆತನು ನ್ಯಾಯ ತೀರ್ಮಾನ ಮಾಡುವಾಗ 'ಮರೆಮಾಚಿದ ಸತ್ಯವನ್ನು ಹುಡುಕುವ ಮೂಲಕ' ತನ್ನ ಮ್ಯಾಜಿಸ್ಟ್ರೇಟ್ ಕೆಲಸದ ಘನತೆಯನ್ನು ಕಾಪಾಡಿಕೊಳ್ಳುವಂತೆ ಸಲಹೆ ನೀಡುತ್ತಾನೆ.

ಜೋಗ್ಯೋರ ಅಂಜಪ್ಪನ ಕೋಳೀಕತೆಯು ಒಬ್ಬ ಪ್ರಾಮಾಣಿಕ, ಮುಗ್ಧ, ಸತ್ಯಸಂಧ ಜೋಗಪ್ಪನ ಆತ್ಮಕಥೆಯಾಗಿದೆ. ಈ ಕತೆಯ ಮೂಲಕ, ಜೋಗಪ್ಪನೆಂದರೆ ಕೇವಲ ಜೋಳಿಗೆ, ಕಿನ್ನೂರಿ ಹಿಡಿದು ಊರೂರು ಅಲೆಯುವ ಭಿಕ್ಷುಕನಂತಲ್ಲ. ಆತನಿಗೆ ಉತ್ತಮಕಂಠ, ನೆನಪಿನ ಶಕ್ತಿ, ಸುಂದರದೇಹ ಮುಂತಾದ ಅರ್ಹತೆಗಳು ಮುಖ್ಯವಾಗುತ್ತವೆ. ಜೋಗಪ್ಪನು ತನ್ನ ಜೋಗಿತನವನ್ನು ಪಡೆಯಲು 25 ವರ್ಷಗಳ ಕಾಲ ಪರಿಶ್ರಮ ಪಡಬೇಕಾಗುತ್ತದೆ. ಹಾಗೆಂದ ಮೇಲೆ ಅದು ಒಂದು ಬಗೆಯ ಜಾನಪದ ಸ್ನಾತಕೋತ್ತರ ಪದವಿಯನ್ನು ಪಡೆದಂತೆಯೇ ಸರಿ ಅಥವಾ ಅದಕ್ಕೂ ಮಿಗಿಲು ಎನ್ನಬಹುದೇನೋ. ಅಲ್ಲದೆ ತಲತಲಾಂತರದಿಂದ ಬಂದಿರುವ ಜಾನಪದ ಸಂಸ್ಕೃತಿಯನ್ನು ಕಾಪಾಡುವ, ಮುಂದುವರಿಸಿಕೊಂಡು ಹೋಗುವ ವಾರಸುದಾರತನವಾಗಿದೆ. ಜೊತೆಗೆ ಅದೊಂದು ಜವಾಬ್ದಾರಿಯ ನಿರ್ವಹಣೆಯೂ ಆಗಿದೆ. ಅಂತಹ ವಿಶೇಷವಾದ ಜವಾಬ್ದಾರಿಯನ್ನು ಹೊತ್ತುಕೊಂಡ ವ್ಯಕ್ತಿತ್ವ ನಮ್ಮ ಅಂಜಪ್ಪನದಾಗಿದೆ.

ಊರೂರು ಅಲೆದು ಸಕಲರಿಂದಲೂ ವಿದ್ಯೆ ಪಡೆದ ಸರ್ವಜ್ಞನಂತೆ ನಮ್ಮ ಅಂಜಪ್ಪನೂ ಅರವತ್ತು, ಎಪ್ಪತ್ತು ಊರುಗಳನ್ನು ಸುತ್ತುತ್ತಿದ್ದ ಎಂದ ಮೇಲೆ ಆತನ ಅನುಭವವೇನೂ ಕಡಿಮೆ ಇರಲಾರದು. ಅಲ್ಲದೆ

ಅಂದಿನ ಕಾಲಘಟ್ಟದಲ್ಲಿ ಜೋಗಿತನ ಅಷ್ಟು ಹೆಸರುವಾಸಿಯಾಗಿತ್ತು ಹಾಗೂ ತನ್ನದೇ ಆದ ಅನೇಕ ರೀತಿ–ನೀತಿಗಳನ್ನು ಹೊಂದಿತ್ತು ಎಂಬುದು ಸ್ಪಷ್ಟವಾಗುತ್ತದೆ. ತನ್ನ ಜೀವನಕ್ಕಾಗಿ ಅನೇಕ ಊರುಗಳನ್ನು ಸುತ್ತುವ ಜೋಗಿಯು ಅಲ್ಲಿ ಅನೇಕರಿಂದ ಸ್ತುತಿ–ನಿಂದೆಗಳನ್ನು ಅನುಭವಿಸಬೇಕಾಗುತ್ತದೆ. ಆದರೆ ಅವುಗಳನ್ನೆಲ್ಲಾ ಅನುಭವದ ಭಾಗವನ್ನಾಗಿ ಮಾತ್ರ ಸ್ವೀಕರಿಸಿ ಸ್ಥಿತಪ್ರಜ್ಞತೆಯಿಂದ ಮುನ್ನಾಗುವುದು ಜೋಗಿಯ ಪಾಲಿಗೆ ಒಂದು ತಪಸ್ಸಾಗಿದೆ. ಜೋಗಿತನ ಮಾಡುವಂತವರು ಸಾಗುವಳಿ ಮಾಡುವಂತಿಲ್ಲ. ಒಂದು ವೇಳೆ ಹಾಗೆ ಮಾಡಿದರೆ "ಬ್ಯಾಮಣರು ಪ್ಯಾಟೆಗಳಾಗೆ ಜೋಡಿನ ಅಂಗಡಿ ಇಟ್ಟರೋ ಹಂಗೆ", ಎಂದು ತಮ್ಮ ಕುಲ ಕಸುಬನ್ನು ನಿರ್ಲಕ್ಷಿಸುವುದು ಅವಮಾನದ ಸಂಗತಿ ಎಂದು ಅಂಜಪ್ಪ ಕುಹಕ ಮಾಡುತ್ತಾನೆ.

ಜೋಗಪ್ಪನ ಮೋಹಕ ಹಾಗೂ ಸಾಂಪ್ರದಾಯಿಕ ವೇಷಭೂಷಣ, ಹಾಡು, ಶೀವಿ, ಗತ್ತು–ಗಮ್ಮತ್ತು ಇವುಗಳಿಂದ ಆ ವೃತ್ತಿಯ ವೈಶಿಷ್ಟ್ಯ ಮೆರೆಯುತ್ತದೆ. ಇಲ್ಲಿ "ಜೋಗಿ ಶೈವನೂ ಅಲ್ಲ ವೈಷ್ಣವನೂ ಅಲ್ಲ: ಕ್ಷುದ್ರ ದೇವತೆಗಳನ್ನು ಪೂಜಿಸುವವನೂ ಅಲ್ಲ; ಅದಿಷ್ವರಲ್ಲಿ ಯಾವುದನ್ನೂ ಬಿಟ್ಟವನೂ ಅಲ್ಲ" ಎಂಬ ಮಾತನ್ನು ಸೂಕ್ಷ್ಮವಾಗಿ ಗಮನಿಸಬೇಕಾಗುತ್ತದೆ. ಈ ಮಾತನ್ನು ಎರಡು ರೀತಿಯಲ್ಲಿ ಅರ್ಥೈಸಬಹುದಾಗಿದೆ. ಇದನ್ನು ಜೋಗಿಯ ಹಿತದೃಷ್ಟಿಯಿಂದ ನೋಡುವುದಾದರೆ, ಆತನಿಗೆ ಭಿಕ್ಷೆ ಹಾಕುವವರು ಬೇರೆ ಬೇರೆ ಮತಕ್ಕೆ ಸೇರಿರುವವರಾದ್ದರಿಂದ ಅವರು ಜೋಗಿಯ ವಿಷಯದಲ್ಲಿ ಇವನು ವೈಷ್ಣವನೆಂತಲೂ, ಶೈವನೆಂತಲೂ ಭೇದ ಮಾಡದೇ ಆತನಿಗೆ ಭಿಕ್ಷೆ ನೀಡುತ್ತಾರೆ. ಮತ್ತೊಂದು ದೃಷ್ಟಿಯಲ್ಲಿ ನೋಡುವುದಾದರೆ ಜೋಗಿಯ ಈ ನಿಲುವು ಸರ್ವಧರ್ಮ ಸಮನ್ವಯವನ್ನು ಸಾರುತ್ತದೆ. ಆತನು ಎಲ್ಲವನ್ನೂ ಒಪ್ಪಿಕೊಳ್ಳುವವನೆಂಬ ನಿದರ್ಶನವನ್ನು ಸಾರುತ್ತದೆ.

ಒಳ್ಳೆಯ ವ್ಯಕ್ತಿತ್ವದ ಅನಾವರಣವಾಗಬೇಕಾದರೆ ಆ ಪಾತ್ರಕ್ಕೆ ಕಷ್ಟಗಳು ಎದುರಾಗಬೇಕಾಗುತ್ತದೆ. ಅಂತಹ ಒಂದು ಘಟನೆ ಅಂಜಪ್ಪನ ಜೀವನದಲ್ಲೂ ನಡೆದು ಅಂಜಪ್ಪನ ವಿಶೇಷ ವ್ಯಕ್ತಿತ್ವದ ಪರಿಚಯ ನಮಗೆ ತಿಳಿಯುತ್ತದೆ. ನಲವತ್ತು ವರ್ಷಗಳ ಹಿಂದೆ ಕಾಳಾಪುರ ಎಂಬ ಊರಿನಲ್ಲಿ ನಡೆದ ಘಟನೆಯು ಅಂಜಪ್ಪನು ಹೇಳುವ ಈ ಕತೆಯ ಮುಖ್ಯ ರಂಗಭೂಮಿಯಾಗಿದೆ. ಇಲ್ಲಿ ನ್ಯಾಯನಿರ್ಣಯವೆಂಬುದು ಎಷ್ಟು ಕಷ್ಟಕರವಾದದ್ದು ಎಂಬುದನ್ನು ಮನಗಾಣಿಸುತ್ತದೆ. ಕೇವಲ ಸಾಕ್ಷಿಗಳ ಆಧಾರದಿಂದ ನ್ಯಾಯನಿರ್ಣಯವನ್ನು ಮಾಡಲು ಸಾಧ್ಯವಿಲ್ಲ. ನ್ಯಾಯನಿರ್ಣಯಕಾರರಿಗೆ ಎಷ್ಟು ತಾಳ್ಮೆಯಿದ್ದರೂ ಕಡಿಮೆ ಎಂಬುದು ಈ ಕತೆಯಿಂದ ಅರಿವಾಗುತ್ತದೆ. ಇಂದಿನ ಸಮಕಾಲೀನ ಬದುಕಿನಲ್ಲಿಯೂ ನ್ಯಾಯನಿರ್ಣಯ ಜಿಜ್ಞಾಸೆಯಾಗಿಯೇ ಇದೆ. ನ್ಯಾಯಾಲಯಗಳಲ್ಲಿ ಸಾಕ್ಷಿಯ ಆಧಾರದ ಮೇಲೆ ನ್ಯಾಯವನ್ನು ತೂಗಿ ನೋಡಿದರೂ, ನ್ಯಾಯಧೀಶನ ಮನಸ್ಸು ಗೊಂದಲದಲ್ಲಿಯೇ ಇರಬಹುದು. ನಿಜವಾದ ಅಪರಾಧಿಗಳನ್ನು ಪತ್ತೆ ಮಾಡುವುದು ಇಂದಿನ ಒಂದು ದೊಡ್ಡ ಸವಾಲಿನ ಕೆಲಸ. ಅಂಜಪ್ಪನ ಬದುಕಿನಲ್ಲಿ ಹಾಗೆ ಆದ ಒಂದು ಪ್ರಸಂಗವನ್ನು ರಂಗಪ್ಪನಿಗೆ ಹೇಳುತ್ತಾ, ರಂಗಪ್ಪನಿಗೆ ಹೀಗೆ ಕಿವಿ ಮಾತನ್ನು ಹೇಳುತ್ತಾನೆ – " ... ನೀನು ಮೇಸ್ತ್ರೀಟಾಗಿದ್ದೀಯಲ್ಲಾ. ಜನರು ಎದುರಿಗೆ ಬಂದಾಗ ಇವರು ಸತ್ಯವಂತ್ರು, ಇವರು ಕಳ್ರು, ಅಂತ ಸರಿಯಾಗಿ ತಿಳಿದು ಶೀಕ್ಷೆ ಕೊಡಬೇಕು. ಈ ಪೋಲೀಸೋರು ಲಾಯರೀಗಳು ಹೇಳೋ ಮಾತು ಕೇಳಿಬಿಟ್ಟು ಶೀಕ್ಷೆ ಕೊಡಬಾರದು..." ಎಂಬ ಈ ಮಾತಿನಲ್ಲಿ ಅಂಜಪ್ಪನ ಸಾಮಾಜಿಕ ಕಾಳಜಿ ಸ್ವಾನುಭಾವದಿಂದ ರೂಪಿತವಾಗಿದೆ.

ಕಾಳಾಪುರದ ಯಾವುದೋ ಮನೆಯ ಸೊಸೆಯೊಬ್ಬಳು ತನ್ನ ಕೋಳಿ ಕಳ್ಳತನದ ಅಪರಾಧವನ್ನು ಮುಚ್ಚಿಡುವ ಸಲುವಾಗಿ ಅಮಾಯಕನಾದ ಅಂಜಪ್ಪನನ್ನು ತಪ್ಪಿತಸ್ಥನನ್ನಾಗಿ ಮಾಡುತ್ತಾಳೆ. ಅವಳ ಮೋಸದ ಜಾಲವನ್ನರಿಯದ ಮುಗ್ಧ ಹಾಗೂ ಪ್ರಾಮಾಣಿಕ ಅಂಜಪ್ಪನು ಮೋಸಕ್ಕೊಳಗಾಗುತ್ತಾನೆ. ಕದ್ದು ಕೋಳಿ ಸಾಗಣೆ ಮಾಡುವ ಹೆಂಗಸು, ತನ್ನ ತಪ್ಪನ್ನು ಮುಚ್ಚಿಡುವ ಸಲುವಾಗಿ ಯೋಜನೆಯೊಂದನ್ನು ರೂಪಿಸುತ್ತಾಳೆ. ಅಂಜಪ್ಪನು ಜೋಗಿತನಕ್ಕಾಗಿ ಕಾಳಾಪುರಕ್ಕೆ ಹೋಗಿದ್ದ ಸಂದರ್ಭದಲ್ಲಿ ಯಾರಿಗೂ ತಿಳಿಯದ ಹಾಗೆ ಆತನ ಜೋಳಿಗೆಯಲ್ಲಿ ಕೋಳಿಯೊಂದನ್ನು ಹಾಕಿ ಬೇಗ ಬೇಗನೇ ಹೋಗಿಬಿಡಲು ತಿಳಿಸುತ್ತಾಳೆ. ಇಲ್ಲಿ ಅಂಜಪ್ಪನ ಜೋಳಿಗೆಯಲ್ಲಿ ಕೋಳಿ ಇರುವ ಸಂಗತಿ ಆ ಹೆಂಗಸು ಹಾಗೂ ಅಂಜಪ್ಪನನ್ನು ಬಿಟ್ಟರೆ ಬೇರೆ ಯಾರಿಗೂ ತಿಳಿದಿರುವುದಿಲ್ಲ. ಆದರೆ ಊರಿನಿಂದ ಅರ್ಧಮೈಲಿ ದೂರಕ್ಕೆ ಹೋಗಿ ಅಲ್ಲಿ ಒಂದು ಬಾವಿಯ ಬಳಿ ವಿಶ್ರಮಿಸುತ್ತಿದ್ದ ಅಂಜಪ್ಪನನ್ನು ಹಿಂಬಾಲಿಸಿ ಬಂದ ವ್ಯಕ್ತಿಯು, ನೇರವಾಗಿ ಅಂಜಪ್ಪನ ಜೋಳಿಗೆಯನ್ನು ಪರಿಶೀಲಿಸುತ್ತಾನೆ. ಜೊತೆಗೆ ಸ್ವಲ್ಪ ಸಮಯದ ನಂತರ ಆ ಹೆಂಗಸಿನ ಅತ್ತೆಯೂ ಸಹ ಅಲ್ಲಿಗೇ ಧಾವಿಸುತ್ತಾಳೆ ಎಂದಮೇಲೆ, ಇದೊಂದು ಪೂರ್ವ ನಿರ್ಧರಿತ ಉಪಾಯ ಎಂಬುದು ಸ್ಪಷ್ಟವಾಗಿ ಅರ್ಥವಾಗುತ್ತದೆ. ಆದರೆ ಇದನ್ನರಿಯದ ಅಂಜಪ್ಪನು ಆ ಹೆಂಗಸಿನ ಮೋಸದ, ಮೋಹದ ಮಾತಿನಜಾಲಕ್ಕೆ ಸಿಲುಕಿ ಅಪರಾಧಿ ಸ್ಥಾನದಲ್ಲಿ ನಿಲ್ಲಬೇಕಾದ ಪ್ರಸಂಗ ಎದುರಾಗುತ್ತದೆ.

"ಕೋಳಿ ಏನೋ ಒಳ್ಳೇ ಪದಾರ್ಥವೇ! ಆದರೆ ಅದನ್ನು ಸುಮ್ಮನೇ ಜೋಗಿಗೆ ಯಾರು ಕೊಡಬೇಕು?" ಎಂಬೀ ಆಲೋಚನೆಗಳು ಅಂಜಪ್ಪನ ತರ್ಕಪಟಲದಲ್ಲಿ ಸುಳಿದುಬರುತ್ತವಾದರೂ ಅದು ಸ್ಪಷ್ಟರೂಪ ಪಡೆದು ತಾನು ಮೋಸದಜಾಲಕ್ಕೆ ಸಿಲುಕಿರುವ ಸತ್ಯವನ್ನು ಅರಿಯುವಷ್ಟರಲ್ಲಿ ಕಾಲ ಮಿಂಚಿ ಹೋಗಿರುತ್ತದೆ. ತಾನು ತಪ್ಪಿತಸ್ಥನಲ್ಲದಿದ್ದರೂ ಆ ಹೆಣ್ಣನ್ನು ಪಾರುಮಾಡುವ ಸಲುವಾಗಿ ಅದನ್ನು ಅನಿವಾರ್ಯವಾಗಿ ಒಪ್ಪಿಕೊಳ್ಳಬೇಕಾದ ಧರ್ಮಸಂಕಟಕ್ಕೆ ಸಿಲುಕುತ್ತಾನೆ. ಅವನು ಮನಸ್ಸು ಮಾಡಿದ್ದರೆ ಆ ಹುಡುಗಿಯೇ ತನಗೆ ಕೋಳಿ ಕೊಟ್ಟಳೆಂದು ಸತ್ಯ ಹೇಳಿ ಸುಲಭವಾಗಿ ತಪ್ಪಿಸಿಕೊಳ್ಳಬಹುದಿತ್ತು, ಆದರೆ ಆತ ಹಾಗೆ ಮಾಡುವುದಿಲ್ಲ. ಈ ಸನ್ನಿವೇಶದಲ್ಲಿ ಅಂಜಪ್ಪನ ಮುಗ್ಧ, ಉದಾರ ಹಾಗೂ ಆದರ್ಶ ವ್ಯಕ್ತಿತ್ವ ಕಾಣಿಸುತ್ತದೆಯೇ ಹೊರತು ಮೂರ್ಖತನವಲ್ಲ.

ಪ್ರಸ್ತುತದಲ್ಲಿ ಈ ಘಟನೆಯನ್ನು ತರ್ಕಕ್ಕೊಳಪಡಿಸುವುದಾದರೆ, ಇಂದು ನಮ್ಮ ಸುತ್ತ ಮುತ್ತ ಅನೇಕ ಜನರು ಬೇರೆಬೇರೆ ಮಾದರಿಯಲ್ಲಿ ಮೋಸಕ್ಕೊಳಗಾಗುತ್ತಾರೆ ಎಂದರೆ ಅದಕ್ಕೆ ಕಾರಣ ಅವರ ಮೂರ್ಖತನವೇ ಆಗಿರುವುದಿಲ್ಲ. ಬದಲಾಗಿ ಒಬ್ಬ ಮನುಷ್ಯನು ಮತ್ತೊಬ್ಬ ಮನುಷ್ಯನ ಮೇಲೆ ಇಡುವ ನಂಬಿಕೆಯೇ ಕಾರಣವಾಗಿರುತ್ತದೆ. ತನ್ನ ಜೀವಿಸುವಿಕೆಗಾಗಿ, ತನ್ನ ಅಪರಾಧಗಳನ್ನು ಮುಚ್ಚಿಡುವುದಕ್ಕೋಸ್ಕರ ಇತರರನ್ನು ಮೋಸಗೊಳಿಸುವ, ತಪ್ಪಿತಸ್ಥರನ್ನಾಗಿ ಮಾಡುವ ಇಂತಹ ವ್ಯಕ್ತಿತ್ವಗಳಲ್ಲಿ ಸಂಸ್ಕೃತಿಯ ಅಧಃಪತನವನ್ನು ಕಾಣಬಹುದಾಗಿದೆ.

ಈ ಕತೆಯಲ್ಲಿ ಅಪರಾಧಿ ಸ್ಥಾನದಲ್ಲಿ ನಿಂತಿರುವ ಅಂಜಪ್ಪನೂ ಸಿಕ್ಕಿದ್ದಾನೆ, ಕಳುವಾದ ಮಾಲೂ ಸಹ ಅವನ ಬಳಿ ಇದೆ, ಆದರೆ ಅವನು ಅಪರಾಧಿಯಲ್ಲ. ಇಂತಹ ಸಂದರ್ಭವು ಕೇವಲ ನ್ಯಾಯಾಧೀಶರನ್ನು ಮಾತ್ರವಲ್ಲ, ಸಹೃದಯರನ್ನೂ ಸಹ ಸತ್ಯದ ಜಾಡನ್ನು ಹಿಡಿಯುವ ಉಪಾಯದ ಹುಡುಕಾಟಕ್ಕೆ ಒಳಗುಮಾಡುತ್ತದೆ. "ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡು" ಎಂಬ ಮಾತು ನೆನಪಾಗುತ್ತದೆ. ಇಲ್ಲಿನ

ಅಂಜಪ್ಪನು, ಪ್ರಸ್ತುತದಲ್ಲಿಯೂ ಮೋಸದಜಾಲಕ್ಕೆ ಸಿಲುಕಿ ಮೋಸ ಹೋಗುವ ಮುಗ್ಧ ಜನರ ಪ್ರತಿನಿಧಿಯಾಗಿದ್ದಾನೆ. ವಾಸ್ತವದಲ್ಲಿ ಜೋಗಪ್ಪನು 'ಅಪರಾಧಿ' ಎಂದು ಕರೆಸಿಕೊಂಡಿದ್ದರೂ, ದಂಡ ಪಾವತಿಸಿ ಶಿಕ್ಷೆ ಅನುಭವಿಸಿದ್ದರೂ ಸಹ ಅವನಲ್ಲಿ ಯಾವುದೇ ಪಾಪ ಪ್ರಜ್ಞೆ ಕಾಡುತ್ತಿಲ್ಲ. ಏಕೆಂದರೆ ಇಲ್ಲಿ ಮನುಷ್ಯನ ಆತ್ಮಸಾಕ್ಷಿಯು ನಿಜವಾದ ನ್ಯಾಯಾಲಯವಾಗಿ ಕಂಡುಬರುತ್ತದೆ. ಹಾಗಾಗಿ ತಾನುಮಾಡಿದ್ದು ಎಷ್ಟು ಸರಿ; ಎಷ್ಟು ತಪ್ಪು? ಎಂಬುದು ನ್ಯಾಯಾಧೀಶನಿಗಿಂತ ಜೋಗಪ್ಪನಿಗೆ ಸರಿಯಾಗಿ ತಿಳಿದಿದೆ. ಅವನು ಕೇವಲ ಯಾರದೋ ಸಾಕ್ಷಿಯನ್ನಷ್ಟೇ ಆಧರಿಸಿ ತೀರ್ಪು ನೀಡುವ ಮನುಷ್ಯರಿಗೆ ಅಷ್ಟು ಬೆಲೆ ನೀಡುವವನಲ್ಲ. ಅವನ ಪಾಲಿಗೆ ನಿಜವಾದ ನ್ಯಾಯಾಧೀಶನೆಂದರೆ ಭಗವಂತನೇ ಆಗಿದ್ದಾನೆ. ಇಲ್ಲಿ 'ಕಣ್ಣಿಗೆ ಕಾಣುವ ದೃಶ್ಯದ ಹಿಂದಿರುವ ಸತ್ಯವನ್ನು ಅರಿಯಲಾಗದ ಮನುಷ್ಯ ಜನ್ಮದ ಮಿತಿ'ಯನ್ನು ಅಂಜಪ್ಪ ಹೇಳಹೊರಟಿದ್ದಾನೆ. ಜೊತೆಗೆ ನ್ಯಾಯವು ತನ್ನ ವಿಮರ್ಶೆಯನ್ನು ಕಾಯ್ದುಕೊಳ್ಳಬೇಕಾದ ತುಡಿತ, ಆಶಯ, ಮನವಿ ಎದ್ದುಕಾಣುತ್ತದೆ.

**ಉಪಸಂಹಾರ**

ಒಟ್ಟಾರೆಯಾಗಿ ಬದುಕಿನಲ್ಲಿ ಎದುರಾಗುವ ಕೆಲವು ಅನಿರೀಕ್ಷಿತ ಘಟನೆಗಳಿಂದಾಗುವ ಪರಿಣಾಮಗಳನ್ನು ಈ ಕತೆಯಲ್ಲಿ ಲೇಖಕರು ವಿವರಿಸಿದ್ದಾರೆ. ಈ ಕತೆಯಲ್ಲಿ ಮನುಷ್ಯನ ಸ್ವಭಾವಗಳ ನಿಗೂಢ ತಂತುಗಳ ಅನಾವರಣವಿದೆ. ಹುಡುಗಿಯೊಬ್ಬಳು ತನ್ನ ಪ್ರಿಯತಮನಿಗೆ ಒಂದೆರಡು ಕೋಳಿ ಕೊಟ್ಟದ್ದನ್ನು ಮರೆಮಾಚುವ ಸಲುವಾಗಿ ಕೋಳಿ ಕಳ್ಳತನವಾಗಿದೆ ಎಂದು ಬಿಂಬಿಸಲು ಊರೂರು ಅಲೆದು ಭಿಕ್ಷೆ ಬೇಡುವ ಅಂಜಪ್ಪನಿಗೆ ಕೋಳಿಯನ್ನು ಕೊಡುತ್ತಾಳೆ. ಈ ಅನಿರೀಕ್ಷಿತ ಘಟನೆಯಿಂದ ಕಳ್ಳತನದ ಆರೋಪವನ್ನೊತ್ತುಕೊಳ್ಳುವ ಅಂಜಪ್ಪ ತಾನೇ ಕದ್ದದ್ದು ಎಂದು ಒಪ್ಪಿಕೊಂಡು ಹುಡುಗಿಯ ಮಾನ ಉಳಿಸುತ್ತಾನೆ. ನಿಜ ಹೇಳಿದರೆ ಹುಡುಗಿಯ ಭವಿಷ್ಯ ಹಾಳಾಗುತ್ತದೆ ಎನ್ನುವುದು ಅಂಜಪ್ಪನ ಉದಾರತನವನ್ನು ತೋರಿಸುತ್ತದೆ. ಒಟ್ಟಾರೆಯಾಗಿ ಈ ಕತೆಯಲ್ಲಿ ಸತ್ಯಾನ್ವೇಷಣೆ ಮಾರ್ಗ ಎಷ್ಟು ಕಷ್ಟವೆಂಬುದು ಈ ಕತೆಯ ವಸ್ತುವಾಗಿ ಕಂಡುಬಂದರೆ, ನಿರಪರಾಧಿಗೆ ಶಿಕ್ಷೆಯಾಗಬಾರದು ಎಂಬುದು ಆಶಯವಾಗಿದೆ.

**ಪರಾಮರ್ಶನ ಗ್ರಂಥಗಳು**


- ಬಾಲ ಸುಬ್ರಮಣ್ಯ ಕಂಜರ್ಪಣೆ. (ಜುಲೈ 9, 2020). ಆಧುನಿಕ ಕನ್ನಡ ಸಾಹಿತ್ಯ ಮತ್ತು ಕಾನೂನು/ನ್ಯಾಯ. ಅನುಗಾಲ ಅಂಕಣ, ವಾರ್ತಾಭಾರತಿ ದಿನಪತ್ರಿಕೆ, ಮಂಗಳೂರು.
- ನುಡಿದೀಪ 2: ಕಥೆ: 4. ಜೋಗ್ಯೋರ ಅಂಜಪ್ಪನ ಕೋಳಿ ಕತೆ. (ಜುಲೈ 25, 2015). ಕಣಜ ಅಂತರ್ಜಾಲ ಪತ್ರಿಕೆ, ಬೆಂಗಳೂರು. ದಿನಾಂಕ 20/06/2021 ರಂದು https://kanaja.karnataka.gov.in/ನುಡಿದೀಪ-೨-ಕಥೆ-೪-ಜೋಗ್ಯೋರ-ಅಂ/ ಅಂತರ್ಜಾಲ ಕೊಂಡಿಯಿಂದ ಪಡೆಯಲಾಗಿದೆ.
- ಸಣ್ಣ ಕಥೆಗಳ ಜನಕ. (2008). ಕಲರವ ಪತ್ರಿಕೆ, ಮಾಹಿತಿಯನ್ನು ದಿನಾಂಕ 26/06/2019 ರಂದು https://kalaravapatrike.wordpress.com/2008/02/27/ಸಣ್ಣ-ಕಥೆಗಳ-ಜನಕ/ ಎಂಬ ಅಂತರ್ಜಾಲ ಕೊಂಡಿಯಿಂದ ಪಡೆಯಲಾಗಿದೆ.